ಇ) ರೂಪಿಸಿದೆ ಪಾವಿನಕುರ್ವೆಯಲ್ಲಿ ಸಮುದ್ರಕೊರೆತ ತಡೆ ಬಗ್ಗೆ ವಿನ್ಯಾಸಕ್ಕಾಗಿ ಸೆಂಟ್ರಲ್ ವಾಟರ್ ಅಂಡ್ ಪವರ್ ಸಂಶೋಧನಾ ಕೇಂದ್ರ, ಪೂನಾ ಇವರನ್ನು ಕೋರಲಾಗಿದೆ. ಸಂಶೋಧನಾ ಕೇಂದ್ರದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಇದರ ಬಗ್ಗೆ ಮಾಡಲ್ ಅಧ್ಯಯನ ನಡೆಸಬೇಕಾಗಿರುವುದರಿಂದ ಮೆ:ವಾಪ್‌ಕೋಸ್, ನ್ಯೂಡೆಲ್ಲಿ ಅವರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲು ಶಿಫಾರಸ್ಸು ಮಾಡಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಜೂನ್ 91ರವರೆಗೆ 133.69 ಲಕ್ಷ ವೆಚ್ಚ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ೫೦.೦೦ ಲಕ್ಷ ಹೆಚ್ಚಿನ ಅನುದಾನದ ಕೋರಿಕೆ ಬಗ್ಗೆ ಪರಿಶೀಲಿಸಲಾಗುತ್ತಿದೆ ಹಾಗೂ ಸಹಾಯಧನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ 15 ಕೋಟಿ ರೂ.ಗಳ ಯೋಜನೆಯಲ್ಲಿ ಉತ್ತರಕನ್ನಡ ಜಿಲ್ಲೆಗೆ 4.958 ಕೋಟಿ ರೂ.ಪ್ರಸ್ತಾವನೆ ಸೇರಿದೆ. ಪ್ರಸ್ತುತ ಸಾಲಿನಲ್ಲಿ ಪಾವಿನಕುರ್ವೆಯಲ್ಲಿ ತುರ್ತು ರಕ್ಷಣಾ ಕಾಮಗಾರಿ ಕೈಗೊಳ್ಳಲು ಕಂದಾಯ ಇಲಾಖೆ 5.00 ಲಕ್ಷ ರೂ.ಬಿಡುಗಡೆ ಮಾಡಿದೆ.

**ಬಳ್ಳಾರಿ-ಕಾರವಾರ ರಾಜ್ಯ ಹೆದ್ದಾರಿ ಅಭಿವೃದ್ಧಿ**

3130 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ವಿಶ್ವಬ್ಯಾಂಕಿನ ನೆರವಿನಿಂದ ಬಳ್ಳಾರಿ ಕಾರವಾರ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಯೋಜನೆಯನ್ನೇನಾದರೂ ರೂಪಿಸಿದೆಯೇ?*

*ಆ) ಹಾಗಿದ್ದಲ್ಲಿ, ಆ ಯೋಜನೆಯ ವಿವರಗಳೇನು?*

*ಇ) ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ತಗಲುವ ವೆಚ್ಚವೆಷ್ಟು?*

*ಈ) ತ್ವರಿತಗತಿಯಲ್ಲಿ, ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಹೌದು.

ಆ) ಯೋಜನೆಯ ಸ್ಥೂಲ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) ಪ್ರಸಕ್ತ ಅಂದಾಜಿನಂತೆ 65 ಕೋಟಿ ರೂಪಾಯಿಗಳು.

ಈ) ಈ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಯಮಿಸಲಾಗಿದ್ದು ಕರಾರನ್ನು ಮಾಡಿಕೊಳ್ಳಲಾಗಿದೆ. ಕಾಮಗಾರಿಯನ್ನು ನಿಗದಿತ ೪ ವರ್ಷಗಳ ಅವಧಿಯಲ್ಲಿ ಮುಗಿಸಲು ಕಾರ್ಯಕ್ರಮ ಹಾಕಿಕೊಂಡಿದ್ದು ಕಾಮಗಾರಿಗಳು ಶೀಘ್ರದಲ್ಲಿ ಪ್ರಾರಂಭವಾಗುತ್ತವೆ.

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3130ರ ಉತ್ತರಕ್ಕೆ ಅನುಬಂಧ

**ಅಂಕೋಲಾ-ಹುಬ್ಬಳ್ಳಿ ರಸ್ತೆಯನ್ನು ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನವರ ಧನಸಹಾಯದಿಂದ ಅಭಿವೃದ್ಧಿಪಡಿಸುವುದು.**

1989ರಲ್ಲಿ ತಯಾರಿಸಿದ ಯೋಜನೆಯ ಸ್ಥೂಲ ವಿವರಗಳ ಯೋಜನಾ ವರದಿಯಂತೆ ಅಂಕೋಲಾದಿಂದ ಬಳ್ಳಾರಿಯವರೆಗಿನ 334.80 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಯನ್ನು ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನವರಿಗೆ ಸಲ್ಲಿಸಲಾಗಿತ್ತು. ಯೋಜನಾ ವರದಿಯನ್ನು ಪರಿಶೀಲಿಸಿ ಮೊದಲನೇ ಹಂತದಲ್ಲಿ ಅಂಕೋಲದಿಂದ ಹುಬ್ಬಳ್ಳಿಯವರೆಗೆ

(132.40 ಕಿ.ಮೀ) ಮಾತ್ರ ಅಭಿವೃದ್ಧಿಪಡಿಸಲು ಸಾಲವನ್ನು ನೀಡಿದ್ದಾರೆ. ಯೋಜನಾ ವಿವರ ಕೆಳಕಂಡಂತಿದೆ.

| ಉದ್ದ | | ಅಂಕೋಲದಿಂದ ಹುಬ್ಬಳ್ಳಿಯವರೆವಿಗೆ ೧೩೨.೪೦ ಕಿ.ಮೀ |
|---|---|---|
| ಕಾಮಗಾರಿ | ಅ) | ಮುಂದಿನ ೨೦ ವರ್ಷಗಳವರೆವಿಗೆ ಆಗುವ ಸಂಚಾರ ಹೆಚ್ಚುವರಿಯನ್ನು ಗಮನಿಸಿ ರಸ್ತೆಯನ್ನು ಬಲಪಡಿಸಿ ಅಭಿವೃದ್ಧಿಪಡಿಸುವುದು. |
| | ಆ) | ಡಾಂಬರಿನ ರಸ್ತೆಯನ್ನು 7 ಮೀಟರ್ ಅಗಲಕ್ಕೆ ವಿಸ್ತರಿಸುವುದು. |
| | ಇ) | ರಸ್ತೆಯ ತಳವನ್ನು 75ಮಿ.ಮೀ. ದಪ್ಪ ಬಿಟುವಿನ್ ಮೆಕಡಮ್ ಅದರ ಮೇಲೆ 100 ಮಿ.ಮೀ. ದಪ್ಪ ಬಿಟುಮಿನ್ ಮೆಕಡಮ್‌ನಿಂದ ಗಟ್ಟಿಪಡಿಸಿ ನಂತರ 40ಮಿ.ಮೀ. ದಪ್ಪಡಾಂಬರು ಕಾಂಕ್ರೀಟ್‌ನ ಮೇಲ್ಪದರ ಹಾಕುವುದು. |
| | ಈ) | ಭಾರತೀಯ ರೆಸ್ತೆ ಕಾಂಗ್ರೆಸ್ ಪ್ರಮಾಣದಂತೆ ಎಲ್ಲಾ ಸೇತುವೆಗಳ ಪುನರ್ ನಿರ್ಮಾಣ ಮಾಡುವುದು. |
| ಕಾಮಗಾರಿಯ ಅವಧಿ | | 91-92ನೇ ಸಾಲಿನಿಂದ 4 ವರ್ಷಗಳು. |
| ಅಂದಾಜು | | 65.00 ಕೋಟಿ ರೂಪಾಯಿಗಳು |
| ಹಣಕಾಸಿನ ವ್ಯವಸ್ಥೆ | | ಪ್ರಸಕ್ತ ರೂಪಾಯಿಯ ಅಪಮೌಲ್ಯವನ್ನು ಅನುಸರಿಸಿ ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನವರಿಂದ ದೊರಕುವ ಧನಸಹಾಯ ಸುಮಾರು 45 ಕೋಟಿ ರೂ.ಗಳು ರಾಜ್ಯ ಸರ್ಕಾರವು 20 ಕೋಟಿ ರೂ. ಭರಿಸಬೇಕಾಗುತ್ತದೆ. |
| ಸಾಲದ ಮರುಪಾವತಿ ಅವಧಿ | | ಸುಮಾರು 25 ವರ್ಷಗಳು. |
| ಯೋಜನೆಯಿಂದ ಆಗುವ ಉಪಯೋಗಗಳು | | ಈ ರಸ್ತೆಯ ಅಭಿವೃದ್ಧಿಯಿಂದ ಈ ಭಾಗದ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗುತ್ತದೆ. ಮುಂದಿನ 20 ವರ್ಷಗಳ (2013ನೇ ಇಸವಿಯ) ವೇಳೆಗೆ ಸಂಚಾರ ನಿರ್ವಹಣೆಯಲ್ಲಿ ಸುಮಾರು 12 ಕೋಟಿ ರೂ.ಗಳ ಉಳಿತಾಯವೂ ಹಾಗೂ ಸುಮಾರು 5914 ಕಿಲೋ ಲೀಟರ್ ಇಂಧನದ ಉಳಿತಾಯವೂ ಆಗುವುದೆಂದು ಅಂದಾಜು ಮಾಡಲಾಗಿದೆ. |
| ಉದ್ಯೋಗ ನಿರ್ಮಾಣ | | ಈ ರಸ್ತೆಯ ನಿರ್ಮಾಣಕ್ಕೆ ತೊಡಗಿಸುವ ಪ್ರತಿ 1 ಲಕ್ಷ ರೂ.ಗಳಿಗೆ ಸುಮಾರು 6 ಜನರಿಗೆ ಉದ್ಯೋಗ ಲಭಿಸುತ್ತದೆ. |